ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/219/2022, E-1096394.** **ದಿನಾಂಕ:5/06/2023**

ಸುತ್ತೋಲೆ

**ವಿಷಯ:** ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಏತ ನೀರಾವರಿ ಯೋಜನೆಗೆ ಒಳಪಡುವ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ವಿಲೇವಾರಿ ಮಾಡುವ ಕುರಿತು.

**ಉಲ್ಲೇಖ:** 1) ಮೀನುಗಾರಿಕೆ ಜಂಟಿ ನಿರ್ದೇಶಕರು, ಬೆಂಗಳೂರುರವರ ಪತ್ರ ಸಂಖ್ಯೆ:ಮೀಜಂನಿ/ಬೆಂವ/ತಾಂತ್ರಿಕಹಗುಪ/12/2023, ಇ-5410, ದಿನಾಂಕ:26/05/2023.
2) ಮೀನುಗಾರಿಕೆ ಉಪ ನಿರ್ದೇಶಕರು, ರಾಮನಗರರವರ ಪತ್ರ ಸಂಖ್ಯೆ: ಹಗುಪ/05/2023-24, ದಿನಾಂಕ:30/05/2023.
3) ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: DOF-TECHOALL1/162/2023, E-11058232, ದಿನಾಂಕ: 24/05/2023.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ 2023-24ನೇ ಸಾಲಿಗೆ ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಏತ ನೀರಾವರಿ ಯೋಜನೆಯಡಿ ಒಳಪಡುವ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು DOF-TECHOALL1/162/2023, E-11058232, ದಿನಾಂಕ: 24/05/2023 ವೇಳಾಪಟ್ಟಿಯಂತೆ ಗುತ್ತಿಗೆ/ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಲಾಗಿದೆ.

ಆದರೆ ಏತ ನೀರಾವರಿ ಯೋಜನೆಯಡಿ ಒಳಪಡುವ ಜಲಸಂಪನ್ಮೂಲಗಳ ವಿಲೇವಾರಿ ಕುರಿತಂತೆ ಪ್ರಸ್ತಾವನೆಯೂ ಸರ್ಕಾರದ ಹಂತದಲ್ಲಿರುವುದರಿಂದ, ಸರ್ಕಾರದಿಂದ ಏತನೀರಾವರಿ ಕೆರೆಗಳ ವಿಲೇವಾರಿ ಕುರಿತು ಸಷ್ಟ ನಿರ್ದೇಶನ ಬರುವವರೆಗೆ, ಏತ ನೀರಾವರಿ ಯೋಜನೆಯಡಿ ಒಳಪಡುವ ಜಲಸಂಪನ್ಮೂಲಗಳನ್ನು ಹೊರತು ಪಡಿಸಿ, ಉಳಿದ ಜಲಸಂಪನ್ಮೂಲಗಳನ್ನು ಕಾರ್ಯನೀತಿ-2014ರನ್ವಯ ವಿಲೇವಾರಿ ಮಾಡಲು ಉಲ್ಲೇಖ(3)ರ ಸುತ್ತೋಲೆಯಲ್ಲಿ ನೀಡಿರುವ ವೇಳಾ ಪಟ್ಟಿಯನ್ವಯ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ.
ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು
ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು
ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ
ಪ್ರತಿಯನ್ನು: ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಜಲಾಶಯ ಉಸ್ತುವಾರಿ ಅಧಿಕಾರಿಗಳು
ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಮತ್ತು (2)ಸಂಗ್ರಹ ಕಡತಕ್ಕೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ

ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/162/2023, E-1058232.** **ದಿನಾಂಕ: 24/05/2023**

ಸುತ್ತೋಲೆ

ವಿಷಯ: ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ವಿಲೇವಾರಿ ಮಾಡುವ ಕುರಿತು.

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, 2023-24ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷದ ನವೀಕರಣದ ದಿನಾಂಕವನ್ನು 31-05-2023ವರೆಗೆ ವಿಸ್ತರಿಸಲಾಗಿತ್ತು. ದಿನಾಂಕ:31/05/2023ರ ಅಂತ್ಯಕ್ಕೆ ಗುತ್ತಿಗೆ/ಬಿಡ್ ಮೊತ್ತ ಪಾವತಿಸಿ ನವೀಕರಿಸಿಕೊಳ್ಳದ ಹಾಗೂ 2022-23 ನೇ ಸಾಲಿಗೆ ಗುತ್ತಿಗೆ ಅವಧಿ ಅಂತ್ಯಗೊಂಡ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ಅನುಬಂಧದಲ್ಲಿ ನೀಡಲಾದ ಪರಿಷ್ಕೃತ ವೇಳಾಪಟ್ಟಿಯಂತೆ ವಿಲೇಗೊಳಿಸಲು ಸೂಚಿಸಲಾಗಿದೆ. ಈ ಪರಿಷ್ಕೃತ ವೇಳಾಪಟ್ಟಿಯು 2023-24ನೇ ಸಾಲಿಗೆ ಮಾತ್ರ ಅನ್ವಯವಾಗುತ್ತದೆ.

ಅಡಕ: ಪರಿಷ್ಕೃತ ವೇಳಾಪಟ್ಟಿ

ಸಹಿ/-

ಮೀನುಗಾರಿಕೆ ನಿರ್ದೇಶಕರು

ಗೆ.

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ

ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ

ಪ್ರತಿಯನ್ನು: ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,) ಜಲಾಶಯ ಉಸ್ತುವಾರಿ ಅಧಿಕಾರಿಗಳು

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಮತ್ತು (2)ಸಂಗ್ರಹ ಕಡತಕ್ಕೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ

ಅನುಬಂಧ

ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು 2023-24ನೇ ಸಾಲಿನಿಂದ ಅನ್ವಯವಾಗುವಂತೆ ಒಳನಾಡು ಜಲಸಂಪನ್ಮೂಲಗಳ ಗುತ್ತಿಗೆ ಕಾರ್ಯನೀತಿ-2014 ರಂತೆ ವಿಲೇವಾರಿ ಮಾಡಲು ಪರಿಷ್ಕೃತ ವೇಳಾಪಟ್ಟಿ (ಪರಿಷ್ಕೃತ ವೇಳಾಪಟ್ಟಿ ಪ್ರಸಕ್ತ ಸಾಲಿಗೆ ಮಾತ್ರ ಅನ್ವಯ)

| ಕ್ರಮ ಸಂಖ್ಯೆ. | ಮೀನು ಪಾಶುವಾರು ಹಕ್ಕಿನ ವಿಲೇ ಪ್ರಕ್ರಿಯೆ | ಪ್ರಾರಂಭದ ದಿನಾಂಕ | ಮುಕ್ತಾಯಗೊಳಿಸಬೇಕಾದ ಅಂತಿಮ ದಿನಾಂಕ |
|---|---|---|---|
| 1. | ಅ) 2023-24ನೇ ಸಾಲಿಗೆ ಅರ್ಹವಿರುವ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ನವೀಕರಣ | -- | 31-05-2023 |
| | ಆ) ಅರ್ಹ ಮೀನುಗಾರರ ಸಹಕಾರ ಸಂಘ/FPOs ಗಳಿಂದ ಅರ್ಜಿ ಆಹ್ವಾನಿಸಿ ನಿಗದಿತ ನಮೂನೆಯಲ್ಲಿ ಪ್ರಕಟಣೆ ಹೊರಡಿಸುವುದು. | 01-06-2023 | 30-06-2023 |
| | ಇ) ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | -- | 21-06-2023 |
| | ಈ) ಪೂರ್ಣ ಮಾಹಿತಿಗಳೊಂದಿಗೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಕಾರ್ಯನೀತಿ ಅನುಬಂಧ-18 ರಂತೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | -- | 30-06-2023 |
| 2. | ಕಂಡಿಕೆ 01 ರಂತೆ ನೇರಗುತ್ತಿಗೆ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ಪ್ರಥಮ (1ನೇ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | 24-06-2023 | 31-07-2023 |
| 3. | ಕಂಡಿಕೆ 02 ರಂತೆ ಟೆಂಡರ್-ಕಂ- ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ದ್ವಿತೀಯ (2ನೇ ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | 01-08-2023 | 30-09-2023 |
| 4. | ಕಂಡಿಕೆ 03 ರಂತೆ ಇ-ಟೆಂಡರ್ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ತೃತೀಯ (3ನೇ) ಸುತ್ತಿನ ಟೆಂಡರ್ ಕಂ ಹರಾಜು ಮೂಲಕ ವಿಲೇ | 01-10-2023 | 30-11-2023 |
| 5. | ಮೇಲ್ಕಂಡ ಕಂಡಿಕೆ 01 ರಿಂದ 04ರವರೆಗೆ ಯಾವ ಪ್ರಕ್ರಿಯೆಯಲ್ಲಿಯೂ ವಿಲೇ ಆಗದ ಜಲಸಂಪನ್ಮೂಲಗಳ ವಿಲೇ ವಿನಾಯ್ತಿ ಪಡೆಯುವ ಅವಧಿ | 01-12-2023 | 31-12-2023 |

ಸಹಿ/-

ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ